22-7-24 37

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ. ರವಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರವನ್ನು ಸಲ್ಲಿಸುವ ಕುರಿತು:

| | |
|---|---|
| **ಪ್ರಶ್ನೆ :** | ಚಿಕ್ಕಮಗಳೂರು ತಾಲ್ಲೂಕು ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಸಂಸ್ಥೆಯು ಧಾರ್ಮಿಕ ದತ್ತಿ ಇಲಾಖೆಯ 'ಎ' ವರ್ಗದ ಸಂಯುಕ್ತ ಧಾರ್ಮಿಕ ಸಂಸ್ಥೆಯಾಗಿದ್ದು, ಹಲವು ಹೋರಾಟಗಳ ನಂತರ ನ್ಯಾಯಾಲಯದ ನಿರ್ದೇಶನದ ಮೇರೆಗೆ ಅರ್ಚಕರ ನೇಮಕ ಆಗಿರುತ್ತದೆ. ದಿನಾಂಕ:01.04.2023ರಿಂದ ಅನ್ವಯವಾಗುವಂತೆ ಅರ್ಚಕರ ನೇಮಕವಾಗಿದ್ದರೂ ಸಹ ಈವರೆಗೆ ಅರ್ಚಕರಿಗೆ ವೇತನ ನಿಗಧಿಪಡಿಸಿರುವುದಿಲ್ಲ. ವೇತನ ನಿಗದಿಪಡಿಸುವ ವಿಚಾರಕ್ಕೆ ಸಂಬಂಧಪಟ್ಟಂತೆ ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ವರದಿ ಪಡೆದು ಅರ್ಚಕರಿಗೆ ವೇತನ ನಿಗಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಸಚಿವರು ಸದನಕ್ಕೆ ಉತ್ತರ ನೀಡಿರುತ್ತಾರೆ. ಅರ್ಚಕರ ಆರತಿ ತಟ್ಟೆಯಲ್ಲಿ ಸಂಗ್ರಹವಾಗುವ ಹಣವನ್ನು ಪಡುತ್ತಿರುವ ಕಾರಣ ಆರತಿ ತಟ್ಟೆ ಹಣದ ಜೊತೆಗೆ ವೇತನ ಶ್ರೇಣಿ ನೀಡಲು ಅವಕಾಶ ಇರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ನೀಡಿರುತ್ತಾರೆ.<br><br>ಈ ಹಿಂದೆ ನೇಮಕವಾಗಿರುವ ಮುಜಾವರ್ ಗಳಿಗೆ ವೇತನ ನೀಡುತ್ತಿದ್ದರೂ ಅರ್ಚಕರಿಗೆ ಮಾತ್ರ ವೇತನ ನೀಡದಿರುವುದು, ಇದು ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎನ್ನುವ ರೀತಿ ಆಗಿದೆ. ಮುಜಾವರ್ ಗಳು ತಟ್ಟೆ ಕಾಸನ್ನು ಪಡೆಯುತ್ತಿದ್ದರೂ ಸಹ ಅವರಿಗೆ ವೇತನ ನಿಗದಿಪಡಿಸಿ ಪ್ರತೀ ತಿಂಗಳು ವೇತನ ಪಾವತಿ ಮಾಡಲಾಗುತ್ತಿದ್ದು, ಅರ್ಚಕರಿಗೆ ಮಾತ್ರ ವೇತನ ನೀಡದೇ ಸರ್ಕಾರ ತಾರತಮ್ಯ ಮಾಡುತ್ತಿದೆ. ಸರ್ಕಾರ ಕೂಡಲೇ ಅರ್ಚಕರಿಗೂ ಸಹ ಸೂಕ್ತ ವೇತನ ನಿಗದಿಪಡಿಸಿ ಪ್ರತೀ ತಿಂಗಳು ಕಾಲಮಿತಿಯೊಳಗೆ ವೇತನ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. |

**ಉತ್ತರ :-**

ಚಿಕ್ಕಮಗಳೂರು ಜಿಲ್ಲೆ, ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಸಂಸ್ಥೆಯು ಒಂದು ಸಂಯುಕ್ತ ಧಾರ್ಮಿಕ ಸಂಸ್ಥೆಯಾಗಿರುತ್ತದೆ. ಈ ಧಾರ್ಮಿಕ ಸಂಸ್ಥೆಯಲ್ಲಿ ರೂಢಿ-ಸಂಪ್ರದಾಯ ಹಾಗೂ ಪ್ರಚಲಿತವಾಗಿರುವ ಆಚರಣೆಯ ಅನುಸಾರವಾದ ಸ್ಥಳವಾಗಿರುತ್ತದೆ. ಈ ಸಂಸ್ಥೆಗೆ ದಿನಾಂಕ:01.04.2023 ರಿಂದ ಜಾರಿಗೆ ಬರುವಂತೆ ಅರ್ಚಕರನ್ನು ನೇಮಕ ಮಾಡಲಾಗಿರುತ್ತದೆ. ಸದರಿ ಅರ್ಚಕರಿಗೆ ನಿಯಮಾನುಸಾರ ಪರಿಶೀಲಿಸಿ ವೇತನವನ್ನು ನಿಗಧಿಪಡಿಸಲು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರಿಗೆ ಸೂಚಿಸಲಾಗಿರುತ್ತದೆ.

ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರು ದಿನಾಂಕ:17.07.2024 ರಂದು ಸಲ್ಲಿಸಿರುವ ವರದಿಯಲ್ಲಿ, ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮ 2002 ರ ನಿಯಮ 8(2)(i)ರನ್ವಯ ಅರ್ಚಕರು ತಟ್ಟೆ ಕಾಸು, ರೊಕ್ಕ ವೆಚ್ಚ ಮತ್ತು ಸೇವಾ ಕಮಿಷನ್ ಪಡೆಯಲು ನಿರಾಕರಿಸಿದ್ದಲ್ಲಿ ಅವರಿಗೆ ವೇತನವನ್ನು ವ್ಯವಸ್ಥಾಪನಾ ಸಮಿತಿಯು ನೇಮಿಸಲಾದ ಪ್ರಾಧಿಕಾರದಿಂದ ಅನುಮೋದನೆಗೆ ಒಳಪಟ್ಟು ಅವರು ಸ್ವೀಕರಿಸುವ ತಟ್ಟೆ ಕಾಸು ಮತ್ತು ಸೇವಾ ರುಸುಂ ಅನ್ನು ಗಮನದಲ್ಲಿರಿಸಿಕೊಂಡು ನಿಗಧಿಪಡಿಸಲು ಅವಕಾಶವಿರುತ್ತದೆ.

ಈ ಕುರಿತು ದಿನಾಂಕ:27.06.2024ರಂದು ವ್ಯವಸ್ಥಾಪನಾ ಸಮಿತಿ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಿ ಅರ್ಚಕರಿಗೆ ಮಾಸಿಕವಾಗಿ ರೂ.9,000/-(ಒಂಭತ್ತು ಸಾವಿರ)ಗಳ ವೇತನವನ್ನು ನಿಗದಿಪಡಿಸಲು ತೀರ್ಮಾನಿಸಲಾಗಿದ್ದು, ಅದರನ್ವಯ, ಇಬ್ಬರು ಅರ್ಚಕರಿಗೆ ಮಾಸಿಕ ತಲಾ ರೂ.9000/-ಗಳನ್ನು ನಿಗದಿಪಡಿಸಿ ಸಂಸ್ಥೆಯ ನಿಧಿಯಿಂದ ಪಾವತಿಸಲು ಅನುಮತಿ ಕೋರಿರುತ್ತಾರೆ.

ಅದರನ್ವಯ, ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇಬ್ಬರು ಅರ್ಚಕರಿಗೆ ತಲಾ ರೂ.9000/-ಗಳಂತೆ ವೇತನ /ಸಂಭಾವನೆಯನ್ನು ನಿಗದಿಪಡಿಸಿ ಸಂಸ್ಥೆಯ ನಿಧಿಯಿಂದ ಪಾವತಿಸಲು ಅನುಮತಿ ನೀಡಲಾಗಿರುತ್ತದೆ.

ಸಂಖ್ಯೆ:ಕಂಇ 101 ಮುಸಪ್ರ 2024.

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.